## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಓ ಎಸ್ ನಂಃ 1/2023

ಪಿಡಬ್ಲ್ಯೂಃ 2

| | |
|---|---|
| ಹೆಸರುಃ | : ಅರ್ಜುನ |
| ತಂದೆ ಹೆಸರುಃ | : ಕುಶಾಲಿ ನಾಯ್ಕ |
| ವಯಸ್ಸುಃ | : 80 ವರ್ಷ |
| ಉದ್ಯೋಗಃ | : -- |
| ವಾಸಃ | : ಹೊಟೆಗಾಳಿ, ಕಾರವಾರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 13-01-2026 ರಂದು ಬೋಧಿಸಲಾಯಿತು.

**(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಎಚ್ ಎಸ್ ಎಸ್ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)**

### ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಡಿ ಎನ್ ನ್ಯಾಯವಾದಿಯವರಿಂದಃ

ಅಶೋಕ ಕುಶಾಲಿ ಕೊಳಂಬಕರ ಹಾಗೂ ತನುಜಾ ತುಕಾರಾಮ ಕಲ್ಗುಟ್ಕರ ಇವರ ಪರಿಚಯ ಇರುತ್ತದೆ. ಮಹಾಬಳೇಶ್ವರ ಭಿಕಾರೋ ಹಳದನಕರ ಇವರ ಪರಿಚಯ ಇರುತ್ತದೆ. ಸುಮಾರು ವರ್ಷಗಳ ಹಿಂದೆ ನನ್ನನ್ನು ಸದರಿ ಮೂರು ವ್ಯಕ್ತಿಗಳು ನನ್ನನ್ನು ವಕೀಲರ ಕಚೇರಿಗೆ ಕರೆದುಕೊಂಡು ಹೋಗಿದ್ದರು. ಸದರಿ ವಕೀಲರ ಹೆಸರು ನನಗೆ ಗೊತ್ತಿಲ್ಲಾ. ಸದರಿ ವಕೀಲರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸ್ವತಃ ನಾನು ಆ ದಿವಸ ವಕೀಲರ ಮನೆಗೆ ಹೋಗಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಯಾವುದೇ ವಕೀಲರನ್ನು ನೋಡಿ ಗುರುತಿಸಿರುವುದಿಲ್ಲಾ.

### ಪಾಟೀ ಸವಾಲುಃ ಶ್ರೀ ಕೆ ಆರ್ ಡಿ ನ್ಯಾಯವಾದಿಯವರಿಂದಃ

ನಾನು ಸುಮಾರು ವರ್ಷಗಳ ಹಿಂದೆ ಯಾವುದೇ ವಕೀಲರ ಕಚೇರಿಗೆ ಹೋಗಿರುವುದಿಲ್ಲಾ , ಯಾವುದೇ ದಾಖಲೆಗವಿಳಿಗೆ ಸಹಿಯನ್ನು ಮಾಡಿರುವುದಿಲ್ಲಾ ಮತ್ತು ನನ್ನ ಸಮಕ್ಷಮ ಯಾವುದೇದಾಖಲೆಗಳು ಆಗಿರುವುದಿಲ್ಲಾ ಎಂದರೆ ಸರಿಯಲ್ಲ.

ಓ ಎಸ್ ನಂಃ 1/2025

**ಪಿಡಬ್ಲ್ಯೂಃ 2**

**<u>ಮರು ವಿಚಾರಣೆಃ – ಇರುವುದಿಲ್ಲ –</u>**

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**